# ನಿಜವಾದ ವಿದ್ಯಾರ್ಥಿ ಯಾರು ?

ಸ್ವಾಮಿ ನಿತ್ಯಸ್ಥಾನಂದ

ದೃಷ್ಟಾಂತದ ಮೂಲಕ ವಿದ್ಯಾರ್ಥಿಗಳಲ್ಲಿ ಇರಬೇಕಾದ ವ್ಯಕ್ತಿತ್ವದ ಸೊಬಗಿನ ಬಗ್ಗೆ ಸ್ಪಷ್ಟವಾಗಿ ತಿಳಿಸಿರುವ ಲೇಖಕರು ಮೈಸೂರಿನಲ್ಲಿರುವ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು ಹಾಗೂ 'ವಿವೇಕಪ್ರಭ'ದ ಪ್ರಥಮ ಸಂಪಾದಕರು.

ಒಬ್ಬರು ಉಪಾಧ್ಯಾಯರಿದ್ದರು. ಅವರು ಅತ್ಯಂತ ನಿಷ್ಠೆಯಿಂದ ಪಾಠ ಹೇಳುತ್ತಿದ್ದರು. ಅವರು ಕೇವಲ ಸಂಬಳಕ್ಕಾಗಿ ಕೆಲಸ ಮಾಡುತ್ತಿರಲಿಲ್ಲ, ತಾವು ಹೇಳಿದ್ದನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಬೇಕು ಎಂಬ ಉದಾತ್ತ ಮನೋಭಾವ ಅವರಲ್ಲಿತ್ತು. ವಿದ್ಯಾರ್ಥಿಗಳಲ್ಲಿ ಜ್ಞಾನತೃಷೆಯನ್ನು ಹೆಚ್ಚಿಸುವುದೇ ಉಪಾಧ್ಯಾಯರ ಮುಖ್ಯ ಕರ್ತವ್ಯ ಎಂಬುದು ಅವರಿಗೆ ತಿಳಿದಿತ್ತು. ವಿದ್ಯಾರ್ಥಿಗಳು ಜ್ಞಾನಾರ್ಜನೆಯಲ್ಲಿ ತೋರುವ ಉತ್ಸಾಹದಲ್ಲಿಯೇ ಅವರು ತಮ್ಮ ಕರ್ತವ್ಯದ ಸಾರ್ಥಕತೆಯನ್ನು ಕಾಣುತ್ತಿದ್ದರು. ವಿಷಯವು ವಿದ್ಯಾರ್ಥಿಗಳ ಮನಸ್ಸಿಗೆ ನಾಟುವಂತೆ ಮಾಡಲು ಅವರು ಆಗಾಗ ಕಥೆ ಹೇಳುತ್ತಿದ್ದರು, ಅನೇಕ ಉದಾಹರಣೆಗಳನ್ನು ಕೊಡುತ್ತಿದ್ದರು, ಕೆಲವೊಮ್ಮೆ ಪ್ರಯೋಗಗಳ ಮೂಲಕವೂ ವಿಷಯವನ್ನು ಸ್ಪಷ್ಟಪಡಿಸುತ್ತಿದ್ದರು. ಒಮ್ಮೆ ಅವರು ಒಂದು ವಿಶಿಷ್ಟ ಪ್ರಯೋಗವನ್ನು ಮಾಡಿದರು. ಒಂದು ಮಣ್ಣಿನ ಹೂಜಿಯನ್ನು ತರಗತಿಗೆ ತಂದರು. ವಿದ್ಯಾರ್ಥಿಗಳಿಗೆಲ್ಲ ಪರಮಾಶ್ಚರ್ಯ. ಏನೋ ಒಂದು ವಿಶೇಷವಿರಬೇಕೆಂದು ಎಲ್ಲರೂ ಕುತೂಹಲ ಮತ್ತು ಉತ್ಸಾಹದಿಂದ ಕಾಯುತ್ತಿದ್ದರು. ಸ್ವಲ್ಪ ಹೊತ್ತಿನಲ್ಲಿ ಶಾಲಾ ಸೇವಕನು ಕೆಲವು ದೊಡ್ಡ ಕಲ್ಲುಗಳನ್ನು ತಂದನು. ಈಗ ವಿದ್ಯಾರ್ಥಿಗಳ ಕುತೂಹಲ ಮತ್ತಷ್ಟು ಕೆರಳಿತು. ಉಪಾಧ್ಯಾಯರು ಆ ಕಲ್ಲುಗಳನ್ನು ಹೂಜಿಗೆ ಹಾಕಿ ಅದನ್ನು ತುಂಬಿಸಿದರು. ಈಗ ಅವರು ವಿದ್ಯಾರ್ಥಿಗಳನ್ನು "ಇನ್ನೇನಾದರೂ ಇದಕ್ಕೆ ತುಂಬಿಸಬಹುದೇ?" ಎಂದು ಕೇಳಿದರು. "ಇಲ್ಲ" ಎಂದು ವಿದ್ಯಾರ್ಥಿಗಳು ಒಕ್ಕೊರಲಿನಿಂದ ಹೇಳಿದರು.

ಉಪಾಧ್ಯಾಯರು ಮುಗುಳ್ನಕ್ಕು ಟೇಬಲ್ ಕೆಳಗಿನಿಂದ ಒಂದು ಬಕೆಟ್‌ನಲ್ಲಿದ್ದ ಸಣ್ಣ ನೊರಜುಗಲ್ಲುಗಳನ್ನು ಹೂಜಿಗೆ ಸುರಿದು ಅದನ್ನು ಚೆನ್ನಾಗಿ ಅಲುಗಾಡಿಸಿದರು. ನೊರಜುಗಲ್ಲುಗಳು ಹೂಜಿಯ ತುಂಬ ಹರಡಿಕೊಂಡು ಅದು ಭರ್ತಿಯಾಯಿತು. "ಇನ್ನೇನಾದರೂ ಹಿಡಿಸುವುದೇ?"ಎಂದು ತುಂಟನಗೆಯೊಂದಿಗೆ ವಿದ್ಯಾರ್ಥಿಗಳನ್ನು ನೋಡಿದರು. ಈಗ ವಿದ್ಯಾರ್ಥಿಗಳು ತುಂಬು ವಿಶ್ವಾಸದಿಂದ "ಹೌದು, ಸಾರ್" ಎಂದು ಜೋರಾಗಿ ಹೇಳಿದರು.



ಉಪಾಧ್ಯಾಯರು ಒಂದು ಬಕೆಟ್ ಮರಳನ್ನು ತೆಗೆದು ಹೂಜಿಗೆ ಸುರಿದರು. ಅದೂ ಹೂಜಿಯೊಳಗೆ ಸೇರಿಕೊಂಡಿತು. "ಇನ್ನೇನು ಹಾಕಬಹುದು?" ಎಂದು ಉಪಾಧ್ಯಾಯರು ಕೇಳುತ್ತಿದ್ದಂತೆಯೇ "ನೀರು" ಎಂದು ಕೆಲವರು ವಿದ್ಯಾರ್ಥಿಗಳು ಹೇಳಿದರು. "ಭೇಷ್" ಎಂದು ಹೇಳುತ್ತ ಉಪಾಧ್ಯಾಯರು ಒಂದು ಬಕೆಟ್ ನೀರನ್ನು ಹೂಜಿಗೆ ಸುರಿದರು. ಈಗ ಹೂಜಿ ಸಂಪೂರ್ಣ ತುಂಬಿಕೊಂಡಿತು.

ಉಪಾಧ್ಯಾಯರು ವಿದ್ಯಾರ್ಥಿಗಳ ಕಡೆ ತಿರುಗಿದರು. ಅವರು ಏನು ಹೇಳುತ್ತಾರೆ ಎಂಬುದನ್ನೇ ಕುತೂಹಲದಿಂದ ನಿರೀಕ್ಷಿಸುತ್ತ ವಿದ್ಯಾರ್ಥಿಗಳು ಕುಳಿತಿದ್ದರು. ಉಪಾಧ್ಯಾಯರು, "ಈ ಪ್ರಯೋಗ ಏನನ್ನು ಬೋಧಿಸುತ್ತದೆ?" ಎಂದು ವಿದ್ಯಾರ್ಥಿಗಳನ್ನೇ ಕೇಳಿದರು. ಇದೊಂದು ಅನಿರೀಕ್ಷಿತ ಪ್ರಶ್ನೆಯಾದರೂ ವಿದ್ಯಾರ್ಥಿಗಳ ಕಲ್ಪನಾಶಕ್ತಿ ಗರಿಗೆದರಿತು. ಕ್ಲಾಸಿನಲ್ಲಿ ಸ್ನೇಹಯುತ ವಾತಾವರಣ ಇದ್ದುದರಿಂದ ವಿದ್ಯಾರ್ಥಿಗಳು ಮುಕ್ತವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಿತ್ತು. ಆದರೆ ಅವಕಾಶ ಮಿತಿಮೀರಿ ಹೋಗದಂತೆ ಉಪಾಧ್ಯಾಯರ ಮೇಲಿರುವ ಗೌರವ ಕಡಿವಾಣ ಹಾಕುತ್ತಿತ್ತು.

ಒಬ್ಬ ವಿದ್ಯಾರ್ಥಿ ಹೇಳಿದ: "ನಮ್ಮ ತಿಳಿಯುವ ಸಾಮರ್ಥ್ಯ ಇಷ್ಟೇ ಎಂದು ಹೇಳಲಾಗುವುದಿಲ್ಲ. ತಿಳಿಯುವ ಆಸಕ್ತಿ ಇದ್ದರೆ ನಮ್ಮ ಮಿದುಳಿಗೆ ಹೆಚ್ಚು ಹೆಚ್ಚು ಸೇರಿಸುತ್ತ ಹೋಗಬಹುದು." ಇನ್ನೊಬ್ಬ ವಿದ್ಯಾರ್ಥಿ ಹೇಳಿದ: "ಬಸ್ಸಿನ ತುಂಬ ಜನ ತುಂಬಿರುತ್ತಾರೆ. ಇನ್ನಾರನ್ನೂ ಹತ್ತಿಸಿಕೊಳ್ಳಲಾಗುವುದಿಲ್ಲ ಎನ್ನುವಂತಿರುತ್ತದೆ. ಆದರೆ ಕೈಚಾಚಿದ ಕಡೆಯೆಲ್ಲ ಬಸ್ಸನ್ನು ನಿಲ್ಲಿಸಿ ಜನರನ್ನು ಹತ್ತಿಸಿಕೊಳ್ಳುತ್ತಲೇ ಹೋಗುತ್ತಾರೆ! ಹತ್ತಿದವರಿಗೆಲ್ಲ ಹೇಗೋ ಜಾಗ ಸಿಕ್ಕಿಯೇ ಸಿಗುತ್ತದೆ." ವಿದ್ಯಾರ್ಥಿಗಳೆಲ್ಲ ಗೊಳ್ಳೆಂದು ನಕ್ಕರು. ಉಪಾಧ್ಯಾಯರೂ ಆ ನಗುವಿನಲ್ಲಿ ಭಾಗ

ವಹಿಸಿದರು. ಇನ್ನೊಬ್ಬ ವಿದ್ಯಾರ್ಥಿಯ ವಿವರಣೆಯನ್ನು ಕೇಳಿ: "ನಾವು ಹೊಟ್ಟೆ ತುಂಬ ಊಟ ಮಾಡಿದ ಮೇಲೂ ತುಂಬ ರುಚಿಕರವಾದ ಪದಾರ್ಥ ಬಂದರೆ ಅದಕ್ಕೆ ಹೇಗೋ ಹೊಟ್ಟೆಯಲ್ಲಿ ಸ್ಥಳಾವಕಾಶ ದೊರೆತೇ ದೊರೆಯುತ್ತದೆ." ವಿದ್ಯಾರ್ಥಿಗಳೆಲ್ಲ ಜೋರಾಗಿ ನಕ್ಕರು. ಉಪಾಧ್ಯಾಯರೂ ಧ್ವನಿಗೂಡಿಸಿದರು.

ಹೀಗೆ ಕಲ್ಪನಾವಿಲಾಸ ಮುಂದುವರಿಯಿತು. ಉಪಾಧ್ಯಾಯರು ಎಲ್ಲರ ಅಭಿಪ್ರಾಯಗಳಿಗೂ ಮನ್ನಣೆ ಇತ್ತರು. ಯಾರ ಅಭಿಪ್ರಾಯವನ್ನೂ ಖಂಡಿಸಲಿಲ್ಲ. ಎಲ್ಲರ ಅಭಿವ್ಯಕ್ತಿಗೂ ಅವಕಾಶ ಕೊಟ್ಟರು. ವಿದ್ಯಾರ್ಥಿಗಳ ಆಂತರಿಕ ಸಾಮರ್ಥ್ಯ, ಪ್ರತಿಭೆಗಳ ಅಭಿವ್ಯಕ್ತಿಗೆ ಇದು ಆವಶ್ಯಕ, ಇಲ್ಲದಿದ್ದರೆ ವಿದ್ಯಾರ್ಥಿಗಳ ಪ್ರಗತಿ ಕುಂಠಿತವಾಗುತ್ತದೆ ಎಂಬುದು ಅವರಿಗೆ ಗೊತ್ತಿತ್ತು. ಎಲ್ಲರ ಅಭಿಪ್ರಾಯಗಳನ್ನೂ ಕೇಳಿ ಆದಮೇಲೆ ತಮ್ಮದೇ ವಿವರಣೆಯನ್ನು ನೀಡಿದರು:

"ಪ್ರಿಯ ವಿದ್ಯಾರ್ಥಿಗಳೇ, ಈ ಪ್ರಯೋಗದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ್ದಕ್ಕೆ ಧನ್ಯವಾದಗಳು. ನಿಮ್ಮೆಲ್ಲರ ಅಭಿಪ್ರಾಯಗಳಲ್ಲೂ ಸತ್ಯಾಂಶವಿದೆ. ಆದರೆ ನಾನು ಈ ಪ್ರಯೋಗವನ್ನು ಮಾಡಿ ತೋರಿಸಿದುದರ ಉದ್ದೇಶವೇ ಬೇರೆ. ನೋಡಿ. ಈ ಹೂಜಿಯಲ್ಲಿ ಮೊದಲು ದೊಡ್ಡ ಕಲ್ಲು, ಅನಂತರ ಕ್ರಮವಾಗಿ ನೊರಜುಗಲ್ಲು, ಮರಳು ಮತ್ತು ನೀರುಗಳನ್ನು ಹಾಕಿದೆವು. ಇದರಿಂದ ಎಲ್ಲ ವಸ್ತುಗಳಿಗೂ ಸ್ಥಳಾವಕಾಶ ದೊರಕಿತು. ಇದರ ಬದಲು ಮೊದಲು ನೀರನ್ನೋ ಮರಳನ್ನೋ ಹಾಕಿದ್ದರೆ ದೊಡ್ಡ ಕಲ್ಲುಗಳನ್ನು ಹಾಕಲಾಗುತ್ತಿರಲಿಲ್ಲ. ನೀವೆಲ್ಲ ವಿದ್ಯಾರ್ಥಿಗಳು, ನಿಮಗೆಲ್ಲ ಒಂದೊಂದು ವ್ಯಕ್ತಿತ್ವವಿದೆ. ಈ ವ್ಯಕ್ತಿತ್ವ ಒಂದು ಹೂಜಿ ಇದ್ದ ಹಾಗೆ. ಅದಕ್ಕೆ ಮೊದಲು ದೊಡ್ಡ ಕಲ್ಲುಗಳನ್ನು ಹಾಕಬೇಕು. ಅವು ಯಾವುವು? ಜ್ಞಾನದ ಹಂಬಲ, ಚಾರಿತ್ರ್ಯಶುದ್ಧಿ, ಮಾನವೀಯ ಸಂಬಂಧ ಮತ್ತು ಆಧ್ಯಾತ್ಮಿಕ ಪ್ರವಣತೆ ಅಥವಾ ಒಲವು—ಇವೇ ದೊಡ್ಡ ಕಲ್ಲುಗಳು. ಇವು ಮೊದಲು ನಿಮ್ಮ ವ್ಯಕ್ತಿತ್ವದೊಡನೆ ಸೇರಬೇಕು. ಅನಂತರ ನೊರಜುಗಲ್ಲು, ಮರಳು ಇತ್ಯಾದಿಗಳನ್ನು—ಅಂದರೆ ಹಣ, ಅಧಿಕಾರ, ಇಂದ್ರಿಯಸುಖ ಇತ್ಯಾದಿಗಳನ್ನು ಅದಕ್ಕೆ ಸೇರಿಸಬಹುದು. ಮೊದಲೇ ಇವುಗಳನ್ನು ಸೇರಿಸಿಬಿಟ್ಟರೆ ದೊಡ್ಡ ಕಲ್ಲುಗಳಿಗೆ ಅವಕಾಶವೇ ಇರುವುದಿಲ್ಲ. ಆದ್ದರಿಂದ ಮೊದಲು ಮೇಲಿನ ನಾಲ್ಕು ಅಂಶಗಳಿಗೆ ಹೆಚ್ಚು ಪ್ರಾಮುಖ್ಯ ನೀಡಬೇಕು.

ಮೊದಲನೆಯದಾಗಿ ಜ್ಞಾನದ ಹಂಬಲ. ವಿದ್ಯಾರ್ಥಿ ಎಂದರೇ ಜ್ಞಾನದ ಹಂಬಲವುಳ್ಳವನು ಎಂದರ್ಥ. ಇದೇ ವಿದ್ಯಾರ್ಥಿಯ ಪ್ರಧಾನ ಲಕ್ಷಣ. ಈಗ ವಿದ್ಯಾರ್ಥಿಗಳೆಲ್ಲ ಹೆಚ್ಚಾಗಿ ನೌಕರಾರ್ಥಿ ಅಥವಾ ಜಾಬಾರ್ಥಿಗಳಾಗಿದ್ದಾರೆ. ಹಣಕ್ಕಾಗಿ ಕೆಲಸ ಸಂಪಾದನೆಯೇ ಮುಖ್ಯ, ಜ್ಞಾನ ಗೌಣವಾಗಿದೆ. ಇದರ ಪರಿಣಾಮವಾಗಿ ಜ್ಞಾನವನ್ನು ಸರಿಯಾಗಿ ಗಳಿಸದೆ ಕೆಲಸವನ್ನು ಸರಿಯಾಗಿ ನಿರ್ವಹಿಸಲು ಅಸಮರ್ಥರಾಗಿದ್ದಾರೆ. ಹೆಚ್ಚು ಹೆಚ್ಚು ತಿಳಿದುಕೊಳ್ಳಬೇಕು, ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು, ಹೊಸ ಹೊಸ ವಿಷಯಗಳನ್ನು ತಿಳಿಯಬೇಕು—ಈ ರೀತಿಯ ಜ್ಞಾನಾಸಕ್ತಿ ನಮ್ಮಲ್ಲಿರಬೇಕು. ಈ ಜ್ಞಾನಾಸಕ್ತಿಯಿಂದಲೇ ವಿಜ್ಞಾನ-ತಾಂತ್ರಿಕತೆ ಇಷ್ಟೊಂದು ಬೆಳೆಯಲು, ನಾಗರಿಕತೆ ಮತ್ತು ಸಂಸ್ಕೃತಿ ಇಷ್ಟೊಂದು ಮುಂದುವರಿಯಲು ಸಾಧ್ಯವಾಗಿದೆ.

ವಿದ್ಯಾರ್ಥಿಗಳು ಕೇವಲ ಪರೀಕ್ಷಾ ದೃಷ್ಟಿಯಿಂದ ಮಾತ್ರ ಓದದೆ ಜ್ಞಾನಸಂಪಾದನೆಯ ದೃಷ್ಟಿಯಿಂದ ಅಧ್ಯಯನ ಮಾಡಿದರೆ ಪರೀಕ್ಷೆಯನ್ನು ನಿರಾಳ ಮನಸ್ಸಿನಿಂದ ಎದುರಿಸಬಹುದು ಮತ್ತು ಹೆಚ್ಚು ಅಂಕಗಳನ್ನೂ ಗಳಿಸಬಹುದು. ಜ್ಞಾನವನ್ನು ಪ್ರೀತಿಸಿ, ಸರಿಯಾದ ಅಧ್ಯಯನದ ಮೂಲಕ ಅದನ್ನು ಅರಗಿಸಿಕೊಂಡರೆ ಅದು—ಸರಿಯಾಗಿ ಜೀರ್ಣಿಸಿಕೊಂಡ ಆಹಾರವು ದೇಹಕ್ಕೆ ಶಕ್ತಿಯನ್ನು ನೀಡುವಂತೆ—ಮನಸ್ಸಿಗೆ ಶಕ್ತಿಯನ್ನು ನೀಡುತ್ತದೆ. "ಜ್ಞಾನದ ಮೌಲ್ಯವಿರುವುದೇ ಮನಃಶಕ್ತಿಯಲ್ಲಿ" ಎನುತ್ತಾರೆ ಸ್ವಾಮಿ ವಿವೇಕಾನಂದರು. ಈ ಜ್ಞಾನದ ಹಂಬಲ ನಮ್ಮನ್ನು ಎಷ್ಟೋ ಇಂದ್ರಿಯಪ್ರಲೋಭನೆಗಳಿಂದ ರಕ್ಷಿಸುತ್ತದೆ. ಜ್ಞಾನದ ಹಂಬಲವೇ ವಿದ್ಯಾರ್ಥಿಗೆ ನಿಜವಾದ ಶೋಭೆಯನ್ನು ತರುವಂತಹ ಸಂಗತಿ.

ಇಂದಿನ ಯುವಕರು ತುಂಬ ಭಾವೋದ್ರೇಕಿ (impulsive) ಗಳಾಗುತ್ತಿದ್ದಾರೆ. ಅವರಿಗೆ ಸ್ವಲ್ಪವೂ ದುಃಖವನ್ನಾಗಲಿ, ಅವಮಾನವನ್ನಾಗಲಿ ಸಹಿಸುವ ಶಕ್ತಿಯಿಲ್ಲ. ಥಟ್ಟನೆ ಕೋಪಕ್ಕೆ ಒಳಗಾಗಿ ಏನೇನೋ ಮಾಡಿಬಿಡುತ್ತಾರೆ. ಕೆಲವೊಮ್ಮೆ ತೀವ್ರ ದುಗುಡಕ್ಕೆ ಒಳಗಾಗಿ ಆತ್ಮಹತ್ಯೆಯನ್ನೇ ಮಾಡಿಕೊಂಡು ಬಿಡುತ್ತಾರೆ. ಈ ಎಲ್ಲ ದುರ್ಬಲತೆಗೆ ಮುಖ್ಯ ಕಾರಣ ಚಾರಿತ್ರ್ಯಶುದ್ಧಿಯ ಕೊರತೆ. ವಿದ್ಯಾರ್ಥಿಯಲ್ಲಿರಬೇಕಾದ ಎರಡನೆಯ ಮುಖ್ಯ ಗುಣ ಚಾರಿತ್ರ್ಯಶುದ್ಧಿ. ಸತ್ಯ, ಪ್ರಾಮಾಣಿಕತೆ, ಅಹಿಂಸೆ (ಇತರರನ್ನು ಯಾವುದೇ ರೀತಿಯಲ್ಲಿಯೂ ನೋಯಿಸದೇ ಇರುವುದು), ಇಂದ್ರಿಯನಿಗ್ರಹ ಇತ್ಯಾದಿ ನೈತಿಕ ಗುಣಗಳನ್ನು ಪಾಲಿಸುವುದರಿಂದ ನಮ್ಮ ಇಚ್ಛಾಶಕ್ತಿ ಪ್ರಬಲವಾಗುತ್ತದೆ. ಇದೇ ಚಾರಿತ್ರ್ಯದ ತಳಹದಿ. ಸ್ವಾಮಿ ವಿವೇಕಾನಂದರ ಪ್ರಕಾರ "ಚಾರಿತ್ರ್ಯಶಕ್ತಿ ಕಷ್ಟಪರಂಪರೆಯ ಅಭೇದ್ಯವಾದ ಗೋಡೆಯನ್ನೂ ತೂರಿಕೊಂಡು ಹೋಗಬಲ್ಲದು." ಜ್ಞಾನದ ಹಂಬಲವು ವ್ಯಕ್ತಿತ್ವಕ್ಕೆ ಒಂದು ಶೋಭೆಯನ್ನು ನೀಡಿದರೆ ಚಾರಿತ್ರ್ಯವು ವ್ಯಕ್ತಿತ್ವಕ್ಕೆ ಶಕ್ತಿಯನ್ನು ನೀಡುತ್ತದೆ.

ಚಾರಿತ್ರ್ಯವೆಂದರೆ, ಸ್ವಾಮಿಜಿಯ ಪ್ರಕಾರ, ಒಟ್ಟು ಸಂಸ್ಕಾರಗಳ ಮೊತ್ತ. ಒಬ್ಬ ವ್ಯಕ್ತಿಯು ಒಳ್ಳೆಯದನ್ನೋ ಕೆಟ್ಟದ್ದನ್ನೋ ನಿರಂತರವಾಗಿ ಮಾಡುತ್ತ, ಚಿಂತಿಸುತ್ತ, ಮಾತನಾಡುತ್ತ ಇದ್ದರೆ

ಅದೇ ಒಂದು ಸಂಸ್ಕಾರವಾಗಿ ಅದಕ್ಕನುಗುಣವಾದ ಚಾರಿತ್ರ್ಯ ಅವನದಾಗುತ್ತದೆ. ಚಾರಿತ್ರ್ಯವನ್ನು ರೂಪಿಸಿಕೊಳ್ಳುವುದು ನಮ್ಮ ಕೈಯಲ್ಲಿದೆ. ಚಾರಿತ್ರ್ಯಶುದ್ಧಿ ಇಲ್ಲದಿದ್ದರೆ ನಾವು ಪಡೆದ ಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಲಾಗುವುದಿಲ್ಲ. ಜ್ಞಾನವು ಒಂದು ಶಕ್ತಿ, ಆಯುಧವಿದ್ದಂತೆ. ಈ ಆಯುಧವು ಉತ್ತಮವ್ಯಕ್ತಿಯ ಕೈಯಲ್ಲಿದ್ದರೆ ಉತ್ತಮ ರೀತಿಯಲ್ಲಿ, ರಚನಾತ್ಮಕವಾಗಿ, ಅವನಿಗೂ ಸಮಾಜಕ್ಕೂ ಒಳ್ಳೆಯದಾಗುವ ರೀತಿಯಲ್ಲಿ ಬಳಸಲ್ಪಡುತ್ತದೆ. ಇದೇ ಆಯುಧವು ದುಷ್ಟನ ಕೈಸೇರಿದರೆ ಅವನಿಗೂ ಸಮಾಜಕ್ಕೂ ಅದರಿಂದ ಮಹತ್ತರ ಹಾನಿಯುಂಟಾಗುತ್ತದೆ. ಆದ್ದರಿಂದ ಜ್ಞಾನಾರ್ಜನೆಯೊಂದಿಗೆ ಶುದ್ಧ ಚಾರಿತ್ರ್ಯಾರ್ಜನೆಯೂ ನಡೆಯಬೇಕು.

ವ್ಯಕ್ತಿತ್ವ ಒಂದು ಸುಂದರ ಹೂವಿನಂತೆ. ಜ್ಞಾನದ ಹಂಬಲ ಆ ಹೂವಿನ ವರ್ಣವೈವಿಧ್ಯದಂತೆ, ಚಾರಿತ್ರ್ಯ ಅದರ ಪರಿಮಳದಂತೆ. ಶುದ್ಧಶಕ್ತಿಯುತ ಚಾರಿತ್ರ್ಯವುಳ್ಳವನು ತನ್ನ ಸುತ್ತಲೂ ಒಂದು ಸ್ಪಂದನವನ್ನು, ಹೂವಿನ ಪರಿಮಳದಂತೆ, ಪಸರಿಸುತ್ತಾನೆ ಮತ್ತು ಅದು ಇತರರ ಮೇಲೆ ಪ್ರಭಾವ ಬೀರುತ್ತದೆ. ಪ್ರೀತಿ, ಅನುಕಂಪ, ಇತರರಿಗಾಗಿ ಕಳಕಳಿ ಮುಂತಾದ ಮಾನವೀಯ ಗುಣಗಳು ಆ ಹೂವಿನ ಮಕರಂದದಂತೆ. ಇವೇ ಮಾನವೀಯ ಸಂಬಂಧದ ಮೂಲಸೂತ್ರಗಳು. ಮಾನವನಿಗೆ ಸಂಬಂಧದ ಆವಶ್ಯಕತೆ ಇದೆ, ಅಷ್ಟೇ ಅಲ್ಲ, ಅದೊಂದು ಮೂಲಭೂತ ಆವಶ್ಯಕತೆಯೂ ಹೌದು. ಇದು ವಿಶೇಷವಾಗಿ ಮಾನವ ಜೀವಿಗೆ ಅನ್ವಯಿಸುವಂತಹುದು. ಇಂದಿನ ಅನೇಕ ಮಾನಸಿಕ ಕಾಯಿಲೆಗಳಿಗೆ ಮಾನವೀಯ ಸಂಬಂಧದ ಕೊರತೆಯೇ ಮುಖ್ಯ ಕಾರಣವೆಂಬುದು ಎಲ್ಲ ಚಿಂತನಶೀಲ ವ್ಯಕ್ತಿಗಳ ಅಭಿಪ್ರಾಯ. (ಈ ವಿಷಯಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ವಿವರಣೆಗೆ *ವಿವೇಕಪ್ರಭ* ಸೆಪ್ಟೆಂಬರ್ ೨೦೦೪ರ "ಸಾಮರಸ್ಯ ಸುಖರಹಸ್ಯ" ಸಂಪಾದಕೀಯ ನೋಡಿ.)

ಹೂವಿನ ಮೂಲ ಯಾವುದು? ಮರ ಅಥವಾ ಗಿಡ. ಮರವಿಲ್ಲದೆ ಹೂವಿಲ್ಲ. ಮರದ ಸಾರವೇ ಹೂವಾಗಿ ಅರಳುತ್ತದೆ. ಹಾಗೆಯೇ ನಮ್ಮ ವ್ಯಕ್ತಿತ್ವದ ಮೂಲ ದಿವ್ಯತೆ ಅಥವಾ ಆಧ್ಯಾತ್ಮಿಕತೆ. ಉದಾತ್ತ ನೈತಿಕ ಮತ್ತು ಆಧ್ಯಾತ್ಮಿಕ ಸಾಧನೆಗಳ ಮೂಲಕ ಆಂತರಿಕ ದಿವ್ಯತೆಯನ್ನು ಅಭಿವ್ಯಕ್ತಗೊಳಿಸುವುದೇ ನಿಜವಾದ ಧರ್ಮ ಎಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ದಿವ್ಯತೆ ಅಭಿವ್ಯಕ್ತಗೊಂಡಾಗ ಶಕ್ತಿ ಬರುತ್ತದೆ, ಪವಿತ್ರತೆ ಬರುತ್ತದೆ ಎಂದು ಸ್ವಾಮಿಜಿ ಹೇಳುತ್ತಾರೆ. ಉನ್ನತ ಮೌಲ್ಯಗಳೆಲ್ಲವೂ ದಿವ್ಯತೆಯ ಮೂಲದಿಂದಲೇ ಬರಬೇಕು, ಜಡ ವಸ್ತುವಿನಿಂದ ಅವು ನಮಗೆ ದೊರೆಯುವುದಿಲ್ಲ. ದಿವ್ಯತೆಯ ಅಭಿವ್ಯಕ್ತಿಯಿಂದ ವ್ಯಕ್ತಿತ್ವವು ಮಾನವೀಯ ಗುಣಗಳ ಮಕರಂದದಿಂದಲೂ, ಚಾರಿತ್ರ್ಯದ ಸುಗಂಧದಿಂದಲೂ, ಜ್ಞಾನದ ವರ್ಣವೈವಿಧ್ಯದಿಂದಲೂ ಕೂಡಿದ ಸರ್ವಾಂಗಸುಂದರ ಪುಷ್ಪವಾಗಿ ಅರಳುತ್ತದೆ. ಆಗ, ಶ್ರೀರಾಮಕೃಷ್ಣರು ಹೇಳುವಂತೆ ದುಂಬಿಗಳು ಅದನ್ನು ಅರಸಿಕೊಂಡು ಬರುತ್ತವೆ.

**ಜ್ಞಾನತೃಷೆ, ಚಾರಿತ್ರ್ಯಶುದ್ಧಿ, ಮಾನವೀಯ ಸಂಬಂಧ ಮತ್ತು ಆಧ್ಯಾತ್ಮಿಕ ಪ್ರವಣತೆ ಅಥವಾ ಒಲವು**—ಮಾನವನನ್ನು ಇತರ ಪ್ರಾಣಿಗಳಿಂದ ಪ್ರತ್ಯೇಕಿಸುವುದು. ಜ್ಞಾನಾಕಾಂಕ್ಷೆ, ಅದನ್ನು ಪಡೆಯುವ ಸಾಮರ್ಥ್ಯ ಮತ್ತು ಕಲಾಭಿರುಚಿ ಇವುಗಳು ಮಾನವನಲ್ಲಿ ಮಾತ್ರ ವಿಶೇಷವಾಗಿ ಕಂಡುಬರುತ್ತವೆ. ನಾವು ನಿಜವಾದ ಮಾನವರೆನಿಸಿಕೊಳ್ಳಬೇಕಾದರೆ ಇವುಗಳನ್ನು ಪಡೆದಿರಬೇಕು. ಭರ್ತೃಹರಿಯ ಒಂದು ಪ್ರಸಿದ್ಧ ಶ್ಲೋಕ ಇದನ್ನು ಸಮರ್ಥಿಸುತ್ತದೆ: **ಸಂಗೀತ ಸಾಹಿತ್ಯ ಕಲಾವಿಹೀನಃ ಸಾಕ್ಷಾತ್ ಪಶುಃ ಪುಚ್ಛವಿಷಾಣಹೀನಃ॥** —"ಸಂಗೀತ, ಸಾಹಿತ್ಯ, ಕಲೆಗಳಲ್ಲಿ ಅಭಿರುಚಿ ಇಲ್ಲದವನು ಸಾಕ್ಷಾತ್ ಪಶುವೇ ಸರಿ; ಕೊಂಬು, ಬಾಲಗಳಿಲ್ಲ ಅಷ್ಟೆ" ಇತ್ಯಾದಿ. ಹಾಗೆಯೇ ಚಾರಿತ್ರ್ಯ ಶುದ್ಧಿಯೂ ಮನುಷ್ಯನಿಗೆ ಮಾತ್ರ ಅನ್ವಯಿಸುವಂತಹುದು. ಇದಕ್ಕೆ ಸಂಬಂಧಪಟ್ಟ ಶಂಕರಾಚಾರ್ಯರ ಶ್ಲೋಕ ಪ್ರಸಿದ್ಧವಾದುದು: **ಆಹಾರನಿದ್ರಾಭಯಮೈಥುನಂ ಚ ।** ಇತ್ಯಾದಿ. ಪರಸ್ಪರ ಪ್ರೀತಿಯ ಸಂಬಂಧವೂ ಮಾನವನಿಗೆ ಮಾತ್ರ ಅನ್ವಯಿಸುವಂತಹುದು. ಬೇರೆ ಪ್ರಾಣಿಗಳಲ್ಲಿ ಉಳಿವೇ ಪ್ರಧಾನ (survival instinct) ಅಂಶ. ತಾಯಿಪ್ರಾಣಿ ಪ್ರಾಣಾಂತಿಕ ಸ್ಥಿತಿಯಲ್ಲಿ ತನ್ನ ಉಳಿವಿಗಾಗಿ ತನ್ನ ಮರಿಗಳನ್ನೇ ಬಲಿಕೊಡಲು ಸಿದ್ಧವಾಗಿರುತ್ತದೆ. ದಿವ್ಯತೆಯ ಅಭಿವ್ಯಕ್ತಿಯಂತೂ ಮಾನವನಿಗೆ ಮಾತ್ರ ಸಾಧ್ಯವಾಗುವಂತಹದು. ನಾವು ನಿಜವಾದ ಅರ್ಥದಲ್ಲಿ ಮಾನವರಾಗಿ ಬಾಳಬೇಕಾದರೆ ಈ ನಾಲ್ಕು ಲಕ್ಷಣಗಳೂ ನಮ್ಮಲ್ಲಿರಬೇಕು. ಪ್ರಿಯ ವಿದ್ಯಾರ್ಥಿಗಳೇ, ಇವುಗಳನ್ನು ನಿಮ್ಮ ಜೀವನದಲ್ಲಿ ಮೈಗೂಡಿಸಿಕೊಂಡು ನೀವೂ ನೆಮ್ಮದಿಯಿಂದ ಬಾಳಿ, ಇತರರಿಗೂ ನೆಮ್ಮದಿಯನ್ನು ನೀಡಿ. ✪

---

**ಶುದ್ಧ ಚಾರಿತ್ರ್ಯವೇ ಜನಾಂಗದ ಜೀವಾಳ. ಲಂಪಟತನವೇ ಜನಾಂಗದ ನಾಶದ ಮೊದಲ ಚಿಹ್ನೆ ಎಂಬುದು ನಿಮಗೆ ಇತಿಹಾಸದಲ್ಲಿ ಕಾಣುವುದಿಲ್ಲವೆ? ಎಂದು ಅದು ಜನಾಂಗದಲ್ಲಿ ತಲೆದೋರುವುದೋ ಆಗಲೇ ಜನಾಂಗದ ನಾಶ ಸನ್ನಿಹಿತವಾದಂತೆ. ...ಬಹುಪಾಲು ಪಂಗಡಗಳೆಲ್ಲ ಅಲ್ಪಕಾಲಿಕ. ನೀರಿನ ಗುಳ್ಳೆಗಳಂತೆ ಎದ್ದು ಮಾಯವಾಗುತ್ತವೆ. ಏಕೆಂದರೆ ಅವುಗಳ ಮುಂದಾಳುಗಳಲ್ಲಿ ಚಾರಿತ್ರ್ಯಶುದ್ಧಿಯುಳ್ಳವರು ಅಪರೂಪ. ಎಂದಿಗೂ ವಿಚಲಿತವಾಗದ ನಿಃಸ್ವಾರ್ಥಪ್ರೇಮ– ಇದೊಂದೇ ಚಾರಿತ್ರ್ಯವನ್ನು ರೂಪಿಸಬಲ್ಲುದು. ನಾಯಕನಲ್ಲಿ ಚಾರಿತ್ರ್ಯಶುದ್ಧಿ ಇಲ್ಲದೇ ಇದ್ದರೆ ಯಾರೂ ಅವನಿಗೆ ವಿಧೇಯರಾಗಿರುವುದಿಲ್ಲ. ಯಾರಲ್ಲಿ ಚಾರಿತ್ರ್ಯ–ಶುದ್ಧಿ ಇದೆಯೋ ಅವರಿಗೆ ಜನರು ಎಂದೆಂದಿಗೂ ವಿಧೇಯರಾಗಿರುವರು – ಹಾಗೂ ಅವರಲ್ಲಿ ವಿಶ್ವಾಸ ತಾಳುವರು. ಒಂದು ಆದರ್ಶವನ್ನು ತೆಗೆದುಕೊಂಡು ಸಾಧನೆ ಮಾಡಿ, ಸಹನೆಯಿಂದ ಹೋರಾಡಿ, ಕೊನೆಗೆ ನಿಮಗೆ ಬೆಳಕು ಬರುವುದು.**

**–ಸ್ವಾಮಿ ವಿವೇಕಾನಂದ**